

ಮಹಿಳೆಯರ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ನಿಕಟ ಸಂಬಂಧವಿದೆ. ಒಂದಕ್ಕೊಂದು ಪೂರಕವಾಗಿರುವ ಈ ಕ್ಷೇತ್ರಗಳಲ್ಲಿ ಸಾಕಷ್ಟು ಅಧ್ಯಯನ ಮಾಡಿರುವ, ಆಪ್ತ ಸಮಾಲೋಚಕರೂ ಆದ, ಕರ್ನಾಟಕದ ಪ್ರಖ್ಯಾತ ವೈದ್ಯೆ,

**ಡಾ.ಪದ್ಮಿನಿ ಪ್ರಸಾದ್**

ಈ ಹೊಸ ಅಂಕಣದಲ್ಲಿ ಪ್ರತಿ ವಾರವೂ 'ಸುಧಾ' ಓದುಗರ ಜತೆ ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ. -ಸಂ.

ಗಂಡಸು, ವಯಸ್ಸು 72. ನನಗೆ ಪ್ರೋಸ್ಟೇಟ್ ಗ್ರಂಥಿ ದೊಡ್ಡದಾಗಿದ್ದರಿಂದ ಒಂದೂವರೆ ವರ್ಷದ ಹಿಂದೆ ಆಪರೇಷನ್ ಆಗಿರುತ್ತದೆ. ನನಗೆ ಸೆಕ್ಸ್ ಮತ್ತು ಸಂಭೋಗದ ಬಗ್ಗೆ ತೀವ್ರ ಆಸಕ್ತಿ. ವಾರದಲ್ಲಿ ಒಂದೆರಡು ಬಾರಿ ಈಗಲೂ ಸಂಭೋಗ ನಡೆಸುತ್ತೇವೆ. ಆದರೆ ವೀರ್ಯಸ್ಖಲನ ಆದಂತಹ ಅನುಭವ ಆಗುತ್ತದೆಯೇ ವಿನಹ ಸ್ಖಲನವಾಗುವುದಿಲ್ಲ. ತೃಪ್ತಿ ಉಂಟಾಗುತ್ತದೆ. ನನ್ನ ಪತ್ನಿ ಸಹಕರಿಸುತ್ತಾಳೆ. ತೃಪ್ತಿ ಪಡುತ್ತಾಳೋ ಇಲ್ಲವೋ ಏನೂ ಹೇಳುವುದಿಲ್ಲ. ವೀರ್ಯಸ್ಖಲನ ಯಾಕೆ ಆಗುವುದಿಲ್ಲ? ಆದಂತೆ ಅನಿಸುವುದು ಹೇಗೆ? 68 ವರ್ಷದ ಹೆಂಡತಿಗೆ ಅಷ್ಟೊಂದು ತೃಪ್ತಿ ಎನಿಸದಿದ್ದರೂ ಹೀಗೆ ಸಂಭೋಗ ನಡೆಸುವುದರಿಂದ ಏನಾದರೂ ತೊಂದರೆಯಾಗುವುದೇ? ನನ್ನ ಅತಿಯಾದ ಸಂಭೋಗಾಸಕ್ತಿ ಯಾವುದಾದರೂ ಕಾಯಿಲೆಯ ಸೂಚನೆಯೆ? ನನಗೆ ಬೇರಾವ ಕಾಯಿಲೆಯೂ ಇಲ್ಲ.

ಪ್ರೋಸ್ಟೇಟ್ ಗ್ರಂಥಿಯ ಆಪರೇಷನ್ ಮಾಡಿದಾಗ ಜನನಾಂಗದ ನರಗಳಲ್ಲಿ ಸ್ವಲ್ಪ ವ್ಯತ್ಯಾಸವಾಗಬಹುದು. ಇದರಿಂದ ಸ್ಖಲನವನ್ನು ನಿಯಂತ್ರಿಸುವ ನರಗಳಲ್ಲಿ ಏರುಪೇರಾಗಬಹುದು, ಸ್ಖಲನವಾಗದೇ ಇರುವುದು ಅಥವಾ ಹಿಮ್ಮುಖ ಸ್ಖಲನ ಮುಂತಾದ ತೊಂದರೆಗಳುಂಟಾಗಬಹುದು. ಹಿಮ್ಮುಖ ಸ್ಖಲನವೆಂದರೆ ಸ್ಖಲನದ ಅನುಭವವಾಗುತ್ತದೆ. ಆದರೆ ವೀರ್ಯ ಮೂತ್ರನಾಳದಿಂದ ಹೊರಗೆ ಬರುವುದರ ಬದಲು ಮೂತ್ರಕೋಶಕ್ಕೆ ಸೇರುತ್ತದೆ. ಸಂಭೋಗದ ನಂತರ ಮೂತ್ರದಲ್ಲಿ ವೀರ್ಯಾಣುಗಳಿದ್ದರೆ (ಸಂತಾನಹರಣ ಶಸ್ತ್ರಚಿಕಿತ್ಸೆ ಆಗಿಲ್ಲದಿದ್ದರೆ) ಹಿಮ್ಮುಖ ಸ್ಖಲನವಿರುವುದು ಗೊತ್ತಾಗುತ್ತದೆ. ನಿಮಗೆ ತೃಪ್ತಿಭಾವನೆ ಬರುವುದರಿಂದ ತೊಂದರೆ ಏನೂ ಇಲ್ಲ. ಕೆಲವು ಸಲ ಸ್ಖಲನವಿಲ್ಲದಿರುವುದರಿಂದ ಪತ್ನಿಗೆ ಸಂತೋಷವಿಲ್ಲದಂತೆ ಎನಿಸಬಹುದು. ಕೆಲವು ದಿನಗಳ ನಂತರ ಅದೇ ಹೊಂದಾಣಿಕೆಯಾಗಿ ಸರಿ ಹೋಗುತ್ತದೆ. ನಿಮಗೆ ಸಂಭೋಗದಲ್ಲಿ ಅತೀ ಆಸಕ್ತಿ ಇರುವುದು ತಪ್ಪಲ್ಲ. ಆದರೆ ಅದರಿಂದ ಪತ್ನಿಗೆ ತೊಂದರೆಯಾಗದಿದ್ದರೆ ಸರಿ. ಪತ್ನಿಗೆ ತೊಂದರೆ, ಹಿಂಸೆಯಾದರೆ ಅದು ಕಾಯಿಲೆ ಎನಿಸಬಹುದು ಅಥವಾ ನಿಮಗೇ ನಿಮ್ಮ ಅತೀವ ಆಸಕ್ತಿಯಿಂದ ತೊಂದರೆಯಾಗುತ್ತಿದ್ದರೆ ಅದಕ್ಕೆ ಚಿಕಿತ್ಸೆ ಬೇಕಾಗುತ್ತದೆ.

ವಿವಾಹಿತೆ ವಯಸ್ಸು 22. ಮದುವೆ ಆಗಿ 1 ವರ್ಷ ಆಯ್ತು. ನಾನು ಮದುವೆ ಆದಮೇಲೂ 1 ವರ್ಷ ಕಾಲೇಜ್‌ಗೆ ಹೋದೆ. ಆದ್ದರಿಂದ ಮಗು ಬೇಡ ಅಂತ ದೂರ ಇದ್ವಿ. ಈಗ ಕಾಲೇಜ್ ಮುಗಿದಿದೆ. ಆದ್ರೆ ನನಗೆ ಲೈಂಗಿಕ ಆಸಕ್ತಿನೇ ಬರುತ್ತಿಲ್ಲ. ಈ ಕಾರಣಕ್ಕಾಗಿ ಪತಿ ತುಂಬಾ ಬೇಸರಗೊಳ್ಳುತ್ತಾರೆ ಮತ್ತು ನನಗೆ ಲೈಂಗಿಕ ಕ್ರಿಯೆ ಮಾಡಲು ಭಯ. ಆ ಸಮಯದಲ್ಲಿ ಮೂತ್ರ ಮಾಡಬೇಕೆನಿಸುತ್ತದೆ. ದಯವಿಟ್ಟು ಕಾರಣ ಮತ್ತು ಪರಿಹಾರ ತಿಳಿಸಿ. ಇದರಿಂದ ನಮ್ಮಿಬ್ಬರಲ್ಲಿ ಮನಸ್ತಾಪ ಉಂಟಾಗುತ್ತಿದೆ. ಈ ಕಾರಣಕ್ಕೆ ನಾವಿಬ್ಬರು ಕೂಡುವುದಿಲ್ಲವೇನೋ ಎಂದು ಭಯ ಆಗುತ್ತಿದೆ.

ಮದುವೆಯಾದ ಹೊಸತರಲ್ಲಿ ಇಬ್ಬರಿಗೂ ಲೈಂಗಿಕ ಆಸಕ್ತಿ ಹೆಚ್ಚಾಗಿ ಇರುತ್ತದೆ. ಆಗ ಬಹಳ ದಿನಗಳವರೆಗೆ ಆಸಕ್ತಿಯನ್ನು ಪೂರೈಸಿಕೊಳ್ಳದಿದ್ದರೆ ಅದರಿಂದ ಆಸಕ್ತಿ ಕಡಿಮೆಯಾಗಬಹುದು. ಆದರೆ ನಿಮ್ಮಲ್ಲಿ 'ಭಯ' ಎಂಬ ಭಾವನೆ ಇರುವುದರಿಂದ ನೀವು ಸಂಭೋಗದಲ್ಲಿ ಹೆಚ್ಚಿನ ಆಸಕ್ತಿ ತೋರಿಸುತ್ತಿಲ್ಲ ಎನಿಸುತ್ತದೆ. ಕೆಲವು ಹುಡುಗಿಯರಿಗೆ ಸುಪ್ತಮನಸ್ಸಿನ ಭಯದಿಂದ 'ಯೋನಿಸೆಡೆತ' ಉಂಟಾಗುತ್ತದೆ. ಅದಕ್ಕೆ ಚಿಕಿತ್ಸೆ ಬೇಕು. ಮೂತ್ರನಾಳ ಯೋನಿಗೆ ಹತ್ತಿರವಾಗಿರುವುದರಿಂದ ಮೂತ್ರ ಮಾಡುವ ಭಾವನೆ ಬರಬಹುದು ಅಥವಾ ನಿಮ್ಮಲ್ಲಿನ ಭಯವು ಇದಕ್ಕೆ ಕಾರಣವಾಗಿರಬಹುದು. ನೀವು ನಿಮ್ಮ ಪತಿಯೊಡನೆ ಲೈಂಗಿಕ ತಜ್ಞರನ್ನು ಕಂಡು ಸಮಸ್ಯೆಯನ್ನು ಪರಿಹರಿಸಿಕೊಳ್ಳಿ. ಸಹಾಯವಾಣಿ 080-23154293ಯನ್ನು ಸಂಪರ್ಕಿಸಬಹುದು

ನಾನು 46 ವರ್ಷದ ಮಹಿಳೆ. ನಮ್ಮ ಯಜಮಾನರಿಗೆ 62 ವಯಸ್ಸು. ನಮ್ಮ ದಾಂಪತ್ಯಕ್ಕೆ 30 ವರ್ಷ. ನಮಗೆ ಪ್ರಾರಂಭದಲ್ಲಿ ಒಂದು ಮಗುವಾಗಿ ನಂತರ ಮಕ್ಕಳು ಆಗಲಿಲ್ಲ. ಈಗಲೂ ವಾರಕ್ಕೆ 3 ರಿಂದ 4 ಬಾರಿ ಕೂಡುತ್ತೇವೆ. ನಮ್ಮಿಬ್ಬರಲ್ಲಿ ಒಳ್ಳೆಯ ಅನ್ಯೋನ್ಯತೆ ಇದೆ. ಇತ್ತೀಚೆಗೆ ನಮ್ಮಿಬ್ಬರ ಮನದಲ್ಲಿ ಒಂದು ಯೋಚನೆ ಬಂದಿದೆ. ನಾನು ಗಂಡಾಗಿ ನಮ್ಮವರು ಹೆಣ್ಣಾಗಿ ಲಿಂಗ ಪರಿರ್ತನೆ ಮಾಡಿಸಿಕೊಂಡು ಜೀವನ ನಡೆಸಬೇಕೆಂಬ ಆಶೆ ಬಂದಿದೆ.

1. ನಾನು ಗಂಡಾಗಿ ಪರಿವರ್ತನೆ ಆಗಲು ನನಗೆ ಪುರುಷ ಜನನಾಂಗ ಬರುತ್ತದೆಯೆ. 2. ನಮ್ಮವರಿಗೆ ಸ್ತ್ರೀ ಜನನಾಂಗ ಬಂದು ರತಿ ಸುಖದ ಸಂವೇದನೆ ಒಬ್ಬ ಮಾಮೂಲಿ ಸ್ತ್ರೀಗೆ ಆಗುವಂತೆ ಅವರಿಗೆ ಆಗುತ್ತದೆಯೇ. 3. ನಮ್ಮವರು ಮಧುಮೇಹಿ ಆಗಿದ್ದು ಇನ್ಸುಲಿನ್ ಮತ್ತು ಮಾತ್ರೆ ಬಳಸುತ್ತಿದ್ದು, ಸಕ್ಕರೆ ಅಂಶ ನಿಯಂತ್ರಣದಲ್ಲಿರುತ್ತದೆ. 4. ಬದಲಾದ ಸ್ಥಿತಿಯಲ್ಲಿ ಸ್ಕಲನದ ಸ್ಥಿತಿ ಹೇಗಿರುತ್ತದೆ. 5. ಇದರ ಖರ್ಚು-ವೆಚ್ಚ ಎಷ್ಟು ಬರಬಹುದು. 6. ಬೆಂಗಳೂರಿನಲ್ಲಿ ಈ ಶಸ್ತ್ರಚಿಕಿತ್ಸೆ ಸೌಲಭ್ಯ ಇದೆಯಾ. ಇಲ್ಲವಾದರೆ ಎಲ್ಲಿಸಿಗುತ್ತೆ. 7. ಇತರೆ ಸಾಧಕ ಬಾಧಕಗಳೇನು? 8. ವಯಸ್ಸಿನ ಮಿತಿ ಇದೆಯಾ?

ನಿಮ್ಮದು ವಿಲಕ್ಷಣ ಆಸೆ ಎನಿಸುತ್ತದೆ. ಲಿಂಗ ಪರಿವರ್ತನೆ ಎನ್ನುವುದು ಸುಲಭದ ಮಾತಲ್ಲ. ಯಾರಿಗಾದರೂ ಸುಮ್ಮ ಸುಮ್ಮನೆ ಲಿಂಗ ಪರಿವರ್ತನೆ ಮಾಡಲು ಸಾಧ್ಯವಿಲ್ಲ. ಅದಕ್ಕೆ ಕೆಲವು ನೀತಿ ನಿಯಮಗಳಿವೆ, ಯಾರಿಗೆ ಮಾಡಬೇಕೆನ್ನುವುದನ್ನು 1-2 ವರ್ಷಗಳ ಕಾಲ ವ್ಯಕ್ತಿಯನ್ನು ಪರೀಕ್ಷಿಸಿ, ಆಪ್ತಸಮಾಲೋಚನೆ ಮಾಡಿ ನಂತರ ವೈದ್ಯರು ನಿರ್ಧರಿಸುತ್ತಾರೆ. ಒಬ್ಬ ವ್ಯಕ್ತಿಯಲ್ಲಿ **'Gender identity disorder'** (ಲಿಂಗದ ಬಗ್ಗೆ ಮನಸ್ಸಿನಲ್ಲಿ ಗೊಂದಲವಿದ್ದಾಗ ಹೆಣ್ಣಿಗೆ ತಾನು ಗಂಡು ಎಂಬ ಭಾವನೆ ಅಥವಾ ಗಂಡಿಗೆ ಮನದಾಳದಲ್ಲಿ ತಾನು ಹೆಣ್ಣು ಎಂಬ ಭಾವನೆ ಅತಿಯಾಗಿದ್ದರೆ) ಎಂಬ ತೊಂದರೆ ಇದ್ದಾಗ ಮಾತ್ರ ವೈದ್ಯರು ಮಾನಸಿಕ ತಜ್ಞರಿಂದ ಸೂಕ್ತ ಪರೀಕ್ಷೆಯನ್ನು ಮಾಡಿಸಬೇಕಾಗುತ್ತದೆ.

1. ಗಂಡಾಗಿ ಪರಿವರ್ತಿಸಿದಾಗ ಜನನಾಂಗಗಳ ಶಸ್ತ್ರಕ್ರಿಯೆ ಮಾಡುತ್ತಾರೆ. ಪುರುಷ ಜನನಾಂಗವನ್ನು (ಶಿಶ್ನ, ಬೀಜಚೀಲ) ಸೃಷ್ಟಿಸುತ್ತಾರೆ.

2. ಪುರುಷನಿಗೆ ಸ್ತ್ರೀ ಜನನಾಂಗದ ಸೃಷ್ಟಿ ಮಾಡುತ್ತಾರೆ. ಯೋನಿಯನ್ನು ಸೃಷ್ಟಿ ಮಾಡಬಹುದು. ಆದರೆ ಗರ್ಭಕೋಶ, ಅಂಡಾಶಯಗಳನ್ನು ಸೃಷ್ಟಿಸಲು ಸಾಧ್ಯವಿಲ್ಲ. ಸ್ತನಗಳ ಕಸಿ ಮಾಡಬಹುದು.

3. **Sex change operation** (ಸ್ತ್ರೀಯಿಂದ ಪುರುಷನಾದಾಗ) ನಲ್ಲಿ ಸ್ಖಲನವಾಗಲು ಸಾಧ್ಯವಿಲ್ಲ.

4. ಖರ್ಚು 2 ರಿಂದ 5 ಲಕ್ಷದವರೆಗೂ ಆಗಬಹುದು. ಇದು ಯಾವ ರೀತಿಯ ಶಸ್ತ್ರಚಿಕಿತ್ಸೆ ಎನ್ನುವುದನ್ನು ಅವಲಂಬಿಸಿರುತ್ತದೆ.

5. ಬೆಂಗಳೂರಿನಲ್ಲಿ ಕೆಲವು ದೊಡ್ಡ ಆಸ್ಪತ್ರೆಗಳಲ್ಲಿ ಇಂತಹ ಶಸ್ತ್ರಚಿಕಿತ್ಸೆ ಮಾಡುತ್ತಾರೆ. ಈ ಶಸ್ತ್ರಚಿಕಿತ್ಸೆಗೆ ವಯಸ್ಸಿನ ಮಿತಿ ಇದೆ.

6. ಸಾಧಕ ಬಾಧಕಗಳು- ಲಿಂಗ ಪರಿವರ್ತನೆ ಆಪರೇಷನ್ ಅನ್ನು ಒಮ್ಮೆ ಮಾಡಿದರೆ ಅದನ್ನು ಮತ್ತೆ ಬದಲಾಯಿಸಲು ಸಾಧ್ಯವಿಲ್ಲ. ಅದು ಶಾಶ್ವತ. ನೀವು ಭಿನ್ನಲಿಂಗಿಗಳಾಗಿದ್ದರೆ. (ನಿಮ್ಮ ಲೈಂಗಿಕ ಆಕರ್ಷಣೆ ಇತರ ಲಿಂಗದವರೊಡನೆ ಇರುವುದು), ಯಾವುದೇ ತೊಂದರೆ ಇಲ್ಲದಿದ್ದಾಗ ಯಾವ ವೈದ್ಯರೂ ದುಡ್ಡಿಗಾಗಿ ಇಂತಹ ಶಸ್ತ್ರಚಿಕಿತ್ಸೆಗಳನ್ನು ಮಾಡುವುದಿಲ್ಲ. ನೀವು ಒಮ್ಮೆ ಮಾನಸಿಕ ತಜ್ಞರನ್ನು ಭೇಟಿಯಾಗಿ. ನೀವು ಲೈಂಗಿಕ ಕ್ರಿಯೆ ನಡೆಸುವಾಗ ನಿಮ್ಮ ಕಲ್ಪನೆಗಳಲ್ಲಿ **(Fantasizing)** ಲಿಂಗ ಪರಿವರ್ತನೆಯಾದಂತೆ ಊಹಿಸಿಕೊಳ್ಳಿ ಅದರಿಂದ ನಿಮ್ಮಲ್ಲಿ ಲೈಂಗಿಕ ತೃಪ್ತಿ, ಲೈಂಗಿಕ ಉದ್ವೇಗ ಹೆಚ್ಚಬಹುದು.

**ನಿಮ್ಮ ಅನಿಸಿಕೆ, ಪ್ರಶ್ನೆಗಳನ್ನು ಸಂಪಾದಕರು 'ಸುಧಾ' 'ಆಪ್ತಗೆಳತಿ' ವಿಭಾಗ, ನಂ.75 ಎಂ.ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ**